# ಆಚಾರ್ಯತ್ರಯರು

ಎಚ್.ವಿ. ಸರೋಜ

## ಶಿಷ್ಯರನ್ನು ಅನುಗ್ರಹಿಸಿದುದು

**ಶ**ಂಕರಾಚಾರ್ಯರು ಶೃಂಗೇರಿಯಲ್ಲಿ ನೆಲೆಸಿದ್ದಾಗ, ಒಬ್ಬ ಶಿಷ್ಯನನ್ನು ಈ ರೀತಿ ಅನುಗ್ರಹಿಸಿದರು: ಅವನ ಹೆಸರು ಗಿರಿ. ಗಿರಿಗೆ ವೇದಾಂತ ಕಬ್ಬಿಣದ ಕಡಲೆಯಾಗಿತ್ತು. ಅವನು ವಿದ್ಯೆ ಕಲಿಯುವುದರಲ್ಲಿ ಎಲ್ಲಾ ಶಿಷ್ಯರಿಗಿಂತ ಹಿಂದಿದ್ದ. ಆದ್ದರಿಂದ ಮಿಕ್ಕ ವಿದ್ಯಾರ್ಥಿಗಳಿಗೆಲ್ಲ ಗಿರಿ ಎಂದರೆ ತಾತ್ಸಾರ. ಒಂದು ದಿನ ಶಂಕರರು ಪಾಠ ಮಾಡಲು ಕುಳಿತಿದ್ದಾರೆ. ಶಿಷ್ಯರೆಲ್ಲರೂ ಬಂದಿದ್ದಾರೆ. ಆದರೆ ಗಿರಿ ಇನ್ನೂ ಬಂದಿಲ್ಲ. ಗುರುಗಳು ಅವನಿಗಾಗಿ ಕಾಯುತ್ತಿದ್ದಾರೆ. ಆಗ ಶಿಷ್ಯರು, "ಗುರುಗಳೇ, ಗಿರಿಗಾಗಿ ಏಕೆ ಕಾಯಬೇಕು? ಅವನಿಗೇನು ಅರ್ಥವಾಗುತ್ತದೆ? ಅವನಿಗೆ ಪಾಠ ಮಾಡುವುದೂ ಒಂದೇ, ಈ ಗೋಡೆಗೆ ಪಾಠ ಮಾಡುವುದೂ ಒಂದೇ" ಎಂದು ಹೇಳಿದರು. ಗಿರಿ ಪಾಠದಲ್ಲಿ ಹಿಂದಿದ್ದರೂ ಗುರುಗಳ ಶುಶ್ರೂಷೆಯನ್ನು ಅಪಾರ ಭಕ್ತಿಯಿಂದ ಮಾಡುತ್ತಿದ್ದ. ಅಂಥ ಶಿಷ್ಯನನ್ನು ಮೂದಲಿಸಿದ್ದು ಶಂಕರರಿಗೆ ನೋವನ್ನುಂಟುಮಾಡಿತು. ಅವರು, "ಆತನ ಪರಿಪಕ್ವ ಮನಸ್ಸನ್ನು, ಅಧ್ಯಾತ್ಮ ಭಾವವನ್ನು ನೀವೇನು ಬಲ್ಲಿರಿ? ಆತನ ಶಕ್ತಿ ಇಷ್ಟರಲ್ಲಿಯೇ ನಿಮಗೆ ಗೊತ್ತಾಗುತ್ತದೆ" ಎಂದು ಹೇಳಿದರು. ಗಿರಿಯು ಗುರುಭಕ್ತಿ, ವಿನಯ ಮತ್ತು ನಿರಹಂಕಾರ ಮೊದಲಾದ ಸದ್ಗುಣಗಳ ಗಣಿಯಾಗಿದ್ದ. ಆತ ತಡವಾಗಿ ಬಂದ. ಶಂಕರರು, "ಗಿರಿ, ಈ ದಿನ ನಿನ್ನಿಂದ ಆತ್ಮತತ್ವವನ್ನು ತಿಳಿಯಬೇಕೆಂದಿದ್ದೇವೆ. ಅದಕ್ಕಾಗಿ ಕಾಯುತ್ತಿದ್ದೆವು" ಎಂದರು. ಇದು ಗುರುವಿನ ಆಜ್ಞೆ. ಅವನು ಇದನ್ನು ಗುರುಗಳ ಆಶೀರ್ವಾದ ಎಂದೇ ಭಾವಿಸಿದ. ಬಹು ವಿನಮ್ರಭಾವದಿಂದ, ಭಕ್ತಿ ತುಂಬಿದ ಕಂಗಳಿಂದ ಆಚಾರ್ಯರನ್ನು ನಮಿಸುವ ರೂಪದಲ್ಲಿ ವೇದಾಂತದ ಸಾರವನ್ನು, 'ತೋಟಕ' ಛಂದಸ್ಸಿನಲ್ಲಿ ರಚಿಸಿದ ಶ್ಲೋಕಗಳ ರೂಪದಲ್ಲಿ ನಿವೇದಿಸಿದ. ಆಗ ಮಿಕ್ಕ ಶಿಷ್ಯರಿಗೆಲ್ಲ ಆಶ್ಚರ್ಯದ ಜೊತೆಗೆ, ತಮ್ಮ ವರ್ತನೆಗೆ ನಾಚಿಕೆಯೂ ಆಯಿತು. ಅವರೆಲ್ಲ ಆಚಾರ್ಯರ, ಗಿರಿಯ ಕ್ಷಮೆ ಬೇಡಿದರು. ಈ ರೀತಿ ಆಚಾರ್ಯರು ಶಿಷ್ಯನಲ್ಲಿ ಅಡಗಿದ್ದ ಸಾರಸ್ವತ ಚೇತನವನ್ನು ಪ್ರಕಟಗೊಳಿಸಿದರು. ಈ ಘಟನೆಯ ಸಂಕೇತವಾಗಿ ಅವನಿಗೆ 'ತೋಟಕಾಚಾರ್ಯ' ಎಂಬ ಹೆಸರನ್ನೇ ನೀಡಿದರು.



ಪದ್ಮಪಾದ, ಸುರೇಶ್ವರ, ಹಸ್ತಾಮಲಕ ಮತ್ತು ತೋಟಕಾಚಾರ್ಯರು ಶಂಕರಾಚಾರ್ಯರ ನಾಲ್ಕು ಪ್ರಮುಖ ಶಿಷ್ಯರು. ಶಂಕರರು ಸುರೇಶ್ವರರನ್ನು ಶೃಂಗೇರಿಯ ದಕ್ಷಿಣಾಮ್ನಾಯ ಪೀಠಕ್ಕೆ, ಪದ್ಮ ಪಾದರನ್ನು ದ್ವಾರಕೆಯ ಕಾಳಿಕಾ ಪೀಠಕ್ಕೆ, ತೋಟಕ ರನ್ನು ಬದರಿಯ ಜ್ಯೋತಿರ್ಪೀಠಕ್ಕೆ ಮತ್ತು ಹಸ್ತಾಮಲಕರನ್ನು ಪುರಿಯ ಗೋವರ್ಧನ ಪೀಠಕ್ಕೆ ನೇಮಿಸಿದರು. ಹೀಗೆ ತಮ್ಮ ಜನ್ಮೋದ್ದೇಶ ಸಫಲವಾಯಿತೆಂದು ಸಂತೋಷಪಟ್ಟರು.

## ತಾಯಿಗೆ ಅಂತಿಮ ದರ್ಶನ

ಇಷ್ಟರಲ್ಲಿ ಶಂಕರಾಚಾರ್ಯರ ತಾಯಿಗೆ ಅವಸಾನ ಕಾಲ ಬಂದೊದಗಿತು. ಅವರು ಶಂಕರರನ್ನು ನೆನೆಯತೊಡಗಿದರು. ಬಹುದೂರದಲ್ಲಿದ್ದರೂ ಕೂಡ ಇದು ಶಂಕರರಿಗೆ ತಿಳಿಯಿತು. ಅವರು ತಾಯಿಗೆ, "ನಾನು ಎಲ್ಲೇ ಇರಲಿ, ನಿನ್ನ ಕಡೆಗಾಲದಲ್ಲಿ ನಿನ್ನ ಬಳಿಯೇ ಇರುತ್ತೇನೆ" ಎಂದು ಮಾತುಕೊಟ್ಟಿದ್ದರು. ತಮ್ಮ ಮಾತಿನಂತೆ, ಅವರು ಕಾಲಡಿಗೆ ಹಿಂದಿರುಗಿದರು. ತಾಯಿಗೆ ಅಪಾರ ಆನಂದ, ಸಮಾಧಾನ ಉಂಟಾಯಿತು. ಶಂಕರರು ವಿಷ್ಣು ಸ್ತೋತ್ರವನ್ನು ರಚಿಸಿ, ತಾಯಿಗೆ ಉಪದೇಶಿಸಿದರು; ಆಕೆಗೆ ಸದ್ಗತಿಯನ್ನು ಕೋರಿದರು. ಕಡೆಯಲ್ಲಿ ಶಂಕರರು ಆಕೆಗೆ ವಿಷ್ಣುವಿನ ದರ್ಶನವನ್ನು ಮಾಡಿಸಿದರು. ಶಂಕರರ ತಾಯಿ ತೀರಿಕೊಂಡರು. ಈಗ ಆಕೆಯ ದೇಹವನ್ನು ಅಗ್ನಿಗೆ ಸಮರ್ಪಿಸಬೇಕು. ಶಂಕರರ ಬಂಧುಗಳು ಮತ್ತು ನೆರೆಹೊರೆಯವರು, ಶಂಕರರು ಸಂನ್ಯಾಸಿಯಾದುದರಿಂದ ತಾಯಿಗೆ ಅಂತ್ಯಸಂಸ್ಕಾರ ಮಾಡುವುದು

ನಿಷಿದ್ಧ ಎಂದು ವಿರೋಧಿಸಿದರು. ಆದರೆ ಶಂಕರರು ಇವರ ಮಾತಿಗೆ ಕಿವಿಗೊಡದೆ, ತಮ್ಮ ತಾಯಿಯ ಕಡೆಯ ಆಸೆಯನ್ನು ನೆರವೇರಿಸಲು, ತಾವೇ ಅಂತ್ಯಸಂಸ್ಕಾರವನ್ನು ನೆರವೇರಿಸಿದರು.

### ಸರ್ವಜ್ಞಪೀಠ ಏರಿದುದು

ಶಂಕರಾಚಾರ್ಯರು ಕಾಶ್ಮೀರಕ್ಕೆ ಭೇಟಿಕೊಟ್ಟರು. ಅಲ್ಲಿನ ಶಾರದಾನಿಲಯದಲ್ಲಿ ಸರ್ವಜ್ಞಪೀಠವಿದೆ. ಆ ಪೀಠವನ್ನು ಹತ್ತಲು ಸರ್ವಜ್ಞರೇ ಆಗಿರಬೇಕೆಂಬ ಪ್ರತೀತಿ ಇತ್ತು. ಶಂಕರರು ಅಲ್ಲಿಗೆ ಬಂದಾಗ ಅವರ ವಿರೋಧಿಗಳು, "ಯೋಗ್ಯರಾಗಿದ್ದರೆ ಸರ್ವಜ್ಞಪೀಠವನ್ನು ಏರಿ" ಎಂದು ಕೆಣಕಿದರು. ಶಂಕರರಿಗೇನೂ ತಾವು ಸರ್ವಜ್ಞರೆಂದು ತೋರಿಸಿಕೊಳ್ಳುವ ಹಂಬಲವಿರಲಿಲ್ಲ. ಆದರೆ ಆ ದೇವಿಯ ಅನುಗ್ರಹ ತಮಗೆ ಅಗತ್ಯ ಎಂದು ಶಾರದಾನಿಲಯಕ್ಕೆ ಹೋಗಲು ತೀರ್ಮಾನಿಸಿದರು. ಶಾರದಾಪೀಠಕ್ಕೆ ನಾಲ್ಕು ದ್ವಾರಗಳು. ಒಂದೊಂದು ದಿಕ್ಕಿಗೆ ಒಂದೊಂದು. ಪ್ರತಿ ದಿಕ್ಕಿನಿಂದಲೂ ವಿದ್ವಾಂಸರು, ತತ್ತ್ವವೇತ್ತರು ಪ್ರವೇಶ ಮಾಡಿ ತಮ್ಮ ಪ್ರತಿಷ್ಠೆಯನ್ನು ಮೆರೆದಿದ್ದರು. ಆದರೆ ಯಾರೂ ಸರ್ವಜ್ಞಪೀಠವನ್ನು ಏರಿರಲಿಲ್ಲ. ಅದುವರೆಗೂ ದಕ್ಷಿಣದ್ವಾರದಿಂದ ದೇವಾಲಯವನ್ನು ಪ್ರವೇಶಿಸಲು ಯಾರೂ ಪ್ರಯತ್ನಪಟ್ಟಿರಲಿಲ್ಲ. ದಕ್ಷಿಣದಿಂದ ಬಂದಿದ್ದ ಶಂಕರಾಚಾರ್ಯರಿಗಾಗಿಯೇ ಆ ದ್ವಾರ ಕಾದಿತ್ತೋ ಏನೋ! ಇವರು ಆ ದ್ವಾರವನ್ನು ಪ್ರವೇಶಿಸುವುದನ್ನು ನೋಡಲು ಅನೇಕ ಪಂಗಡಗಳ, ಧರ್ಮಗಳ ವಿದ್ವಾಂಸರು ನೆರೆದಿದ್ದರು. ಆದರೆ ದೇವಾಲಯವನ್ನು ಪ್ರವೇಶಿಸುವುದಕ್ಕೆ ಮುನ್ನ ಅಲ್ಲಿ ನೆರೆದಿದ್ದ ಜೈನ, ಬೌದ್ಧ, ಸಾಂಖ್ಯ, ನ್ಯಾಯ, ಯೋಗ, ವೈಶೇಷಿಕ ಮುಂತಾದ ಮತಧರ್ಮಗಳ ಪಂಡಿತರು ಅಡ್ಡಬಂದರು. ಆಗ ಅವರಲ್ಲಿ ಪ್ರತಿಯೊಬ್ಬರನ್ನೂ ವಾದದಲ್ಲಿ ಜಯಿಸಿ, ದಕ್ಷಿಣದ್ವಾರದಿಂದ ಶಂಕರರು ದೇವಾಲಯವನ್ನು ಪ್ರವೇಶಿಸಿದರು.

ಅನಂತರ ಆಚಾರ್ಯರು ಸರ್ವಜ್ಞಪೀಠವನ್ನು ಏರಲು ಹೋದರು. ಆಗ ವಿದ್ಯಾಧಿದೇವತೆಯಾದ ಶ್ರೀಶಾರದೆಯೇ ಶಂಕರರಿಗೆ ಒಂದು ಪರೀಕ್ಷೆ ಒಡ್ಡಿದಳು. ಅದರಲ್ಲೂ ಶಂಕರರು ವಿಜಯಿಯಾದರು. ಆಗ ದೇವಿ ಅವರನ್ನು ಆಶೀರ್ವದಿಸಿ, ಅವರ ಸರ್ವಜ್ಞತೆಯನ್ನು ಸಾರಿ, ಪೀಠ ಏರುವುದಕ್ಕೆ ಅನುಮತಿ ಕೊಟ್ಟಳು.

### ಅಂತರ್ಧಾನ

ಕೇವಲ ೩೨ ವರ್ಷ ವಯಸ್ಸಿಗೆ ಶಂಕರರು ಇದೆಲ್ಲವನ್ನೂ ಸಾಧಿಸಿದ್ದರು. ಭಾರತದ ಪ್ರದಕ್ಷಿಣೆಯನ್ನು ಎರಡು ಸಲ ಮಾಡಿದ್ದರು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ, ಪೂರ್ವದ ಪುರಿ ಜಗನ್ನಾಥದಿಂದ ಪಶ್ಚಿಮದ ದ್ವಾರಕೆಯವರೆಗೂ ಸಂಚಾರ ಮಾಡಿ ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು; ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸಿದರು; ಅದ್ವೈತಮತ ಪ್ರಚಾರ ಮಾಡಿದರು.

ಶ್ರೀಶಂಕರಾಚಾರ್ಯರ ಬೋಧನೆಗಳಲ್ಲಿ ಮುಖ್ಯವಾದುವು ಇವು : ಜ್ಞಾನ, ಭಕ್ತಿ, ವೈರಾಗ್ಯ ಇತ್ಯಾದಿ ಸಾತ್ತ್ವಿಕ ಗುಣಗಳಿಂದ ನಮ್ಮ ಜೀವನ ಶೋಭಿಸಬೇಕು. ಜಗತ್ತಿನಲ್ಲಿ ಎಲ್ಲವೂ ಬ್ರಹ್ಮಸ್ವರೂಪ. ಜಗತ್ತಿನಲ್ಲಿ ಬದಲಾವಣೆಗಳಿರುತ್ತವೆ. ಬದಲಾವಣೆಗಳು ಸತ್ಯವಲ್ಲ, ಅದರ ಹಿಂದೆ ಇರುವ ಬ್ರಹ್ಮ ಸತ್ಯ. ಜೀವಿಯು ತನ್ನ ಅವಿದ್ಯೆಯನ್ನು ಕಳೆದುಕೊಂಡರೆ, ಉಳಿಯುವುದು ಬ್ರಹ್ಮರೂಪವೇ. ಹೀಗಾಗಿ ತಾತ್ತ್ವಿಕವಾಗಿ ಜೀವ ಬ್ರಹ್ಮರಲ್ಲಿ ಭೇದವಿಲ್ಲ. ಮನುಷ್ಯರಲ್ಲಿ ಮೇಲು ಕೀಳುಗಳಿಲ್ಲ. ಎಲ್ಲರಲ್ಲಿಯೂ ಪರಮಾತ್ಮನನ್ನು ಕಾಣುವ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಅದಲ್ಲದೆ ಜನರ ಭಕ್ತಿಗೆ ಪೋಷಣೆಯಾಗುವಂತೆ ಅನೇಕ ಭಕ್ತಿಸ್ತೋತ್ರಗಳನ್ನೂ ಶ್ರೀಶಂಕರರು ರಚಿಸಿದರು.

ಶ್ರೀಶಂಕರಾಚಾರ್ಯರು ತಮ್ಮ ಜೀವಿತದ ಅಂತ್ಯದಲ್ಲಿ ಹಿಮಾಲಯದ ಕಡೆ ಹೊರಟು, ಕೇದಾರ ಕ್ಷೇತ್ರವನ್ನು ತಲುಪಿದರು. ಅಲ್ಲಿಯೇ ಅವರು ಅಂತರ್ಧಾನರಾದರೆಂಬ ಪ್ರತೀತಿ ಇದೆ.

'ಶಂಕರ' ಎಂದರೆ ಒಳ್ಳೆಯದನ್ನು ಮಾಡುವವನು ಎಂಬ ಅರ್ಥವೂ ಇದೆ. ನಮ್ಮಲ್ಲಿರುವ ದೈವೀಗುಣವನ್ನು ಚೈತನ್ಯಗೊಳಿಸುವವನು ಎಂದೂ ಇದಕ್ಕೆ ವಿವರಣೆಯನ್ನು ನೀಡಬಹುದು. ಈ ಹೆಸರು ಶ್ರೀಶಂಕರಾಚಾರ್ಯರ ವಿಷಯದಲ್ಲಿ ಅನ್ವರ್ಥವಾಗಿದೆ. ಆಚಾರ್ಯರು ಮಹಾದಾರ್ಶನಿಕರು; ಪ್ರತಿಭಾನ್ವಿತ ಕವಿಗಳು; ಬಹು ದೊಡ್ಡ ಕರ್ಮ ಯೋಗಿಗಳು. ಈ ಮೂರನ್ನೂ ಒಬ್ಬನೇ ವ್ಯಕ್ತಿಯಲ್ಲಿ ಕಾಣುವುದು ದುರ್ಲಭ. ಹೀಗಾಗಿ ಧಾರ್ಮಿಕ, ಸಾತ್ತ್ವಿಕ ಹಾಗೂ ತಾತ್ತ್ವಿಕ ಪ್ರಪಂಚದಲ್ಲಿ, ಮಾನವ ಜನಾಂಗದ ಇತಿಹಾಸದಲ್ಲಿಯೇ ಅತ್ಯದ್ಭುತ ವ್ಯಕ್ತಿಯಾಗಿ ಮೆರೆಯುತ್ತಾರೆ, ಶ್ರೀಶಂಕರ ಭಗವತ್ಪಾದರು.

•